Greenlam

Industries Limited

# ಗ್ರೀನ್‌ನತ್ತ ಪಯಣ

www.greenlamindustries.com

# ಸುಸ್ಥಿರದೊಂದಿಗೆ ಸೌಂದರ್ಯ



ಸುಸ್ಥಿರತೆ ಎನ್ನುವುದು ಪರಿಸರದಲ್ಲಿ ಮಾತ್ರವಲ್ಲ, ಸಮಾಜ ಮತ್ತು ಆರ್ಥಿಕತೆಯಲ್ಲೂ ಸಂಪನ್ಮೂಲಗಳನ್ನು ಹೇಗೆ ಬಳಸಿಕೊಳ್ಳುತ್ತೇವೆ ಮತ್ತು ಸಜ್ಜುಗೊಳಿಸುತ್ತೇವೆ ಎಂಬುದಾಗಿದೆ ಎಂದು ನಾವು ಗ್ರೀನ್‌ಲಾಮ್‌ನಲ್ಲಿ ಅರ್ಥಮಾಡಿಕೊಂಡಿದ್ದೇವೆ. ಹವಾಮಾನ ಬದಲಾವಣೆ ವಾಸ್ತವವಾದುದರಿಂದ ನಮ್ಮ ಭೂಮಿಗೆ ಹಾನಿ ಮಾಡಿ  ಸುಂದರವಾದ ಸ್ಥಳಗಳನ್ನು ಸೃಷ್ಟಿಸುವುದು ಯಾವತ್ತಿಗೂ ಸಾಧ್ಯವಿಲ್ಲ ಎಂಬುದು ನಮ್ಮ ನಂಬಿಕೆ. ಆದ್ದರಿಂದ ನಾವು ಸುಸ್ಥಿರ ಪ್ರಕ್ರಿಯೆಗಳನ್ನು ಬಳಸಿಕೊಂಡು ಉತ್ತಮ ಉತ್ಪನ್ನಗಳನ್ನು ತಯಾರಿಸುವ

ಬದ್ಧತೆಯನ್ನು ಹೊಂದಿದ್ದೇವೆ ಮತ್ತು ಜನರು ಮತ್ತು ಭೂಮಿಯ ಮೇಲೆ ಅವುಗಳ ಪರಿಣಾಮ ಸೌಮ್ಯವಾಗಿರುತ್ತದೆ.
ಪರಿಸರದ ಮೇಲೆ ನಮ್ಮ ಪ್ರಭಾವವನ್ನು ಧನಾತ್ಮಕವಾಗಿರಿಸಲು, ನಾವು ಗ್ರೀನ್ ಸ್ಟ್ರಾಟರ್ಜಿ ಗ್ರೂಪ್ ಅನ್ನು ಸ್ಥಾಪಿಸಿದ್ದೇವೆ. ನಮ್ಮ ಸಂಸ್ಥೆಯಾದ್ಯಂತ ಅನೇಕ ಹಸಿರು ಉಪಕ್ರಮಗಳನ್ನು ಅಭಿವೃದ್ಧಿಪಡಿಸುವಲ್ಲಿ, ಅಳವಡಿಸುವಲ್ಲಿ ಮತ್ತು ಮೇಲ್ವಿಚಾರಣೆ ಮಾಡುವಲ್ಲಿ ಏಕಮನಸ್ಸಿನಿಂದ ಕೆಲಸ ಮಾಡುವುದು ಈ ಗ್ರೂಪ್‌ನ ಕಾರ್ಯವಾಗಿದೆ. ಇದರಿಂದ ನಾವೇನು ಮಾಡಿದರೂ ಕೇವಲ ಇಂಗಾಲದ ಹೆಜ್ಜೆಗುರುಲ್ಲದೇ ಏನೋ ಅರ್ಥಪೂರ್ಣವಾದುದನ್ನು ಉಳಿಸಿಬಿಡುತ್ತೇವೆ.

## 1 ಇಂಧನ ಮತ್ತು ನೀರಿನ ಸಂರಕ್ಷಣೆ



ಪರಿಸರ ರಕ್ಷಣೆ ಮತ್ತು ನವೀಕರಣವನ್ನು ಉತ್ತೇಜಿಸುವ ವಿಧಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ಆರ್ಥಿಕ ಬೆಳವಣಿಗೆ ಮತ್ತು ಧನಾತ್ಮಕ ಸಾಮಾಜಿಕ ಪರಿಣಾಮಗಳ ನಡುವೆ ಸಮತೋಲನ ಸೃಷ್ಟಿಸುವುದು ನಮ್ಮ ಧ್ಯೇಯವಾಗಿದೆ. ಅಂತಹ ಒಂದು ವಿಧಾನವೆಂದರೆ ಒತ್ತಡಯುಕ್ತ ಬಿಸಿನೀರಿನ ಪ್ರಕ್ರಿಯೆಯನ್ನು ಬಳಸುವುದು, ಇದು ಒಂದು ಯೂನಿಟ್‌ಗೆ ಉತ್ಪಾದನೆಗೆ ಬಳಸಿಕೊಂಡ ನೀರಿನ ಕೈಗಾರಿಕಾ ಮಾನದಂಡವನ್ನು ಪೂರೈಸುತ್ತದೆ. ಇದರೊಂದಿಗೆ, ನಾವು ಅಂತರ್ಜಲ ಬಳಕೆ, ಹೆಚ್ಚಿನ TDS ನೊಂದಿಗೆ ಸಂಸ್ಕರಿಸಲಾದ STP ಲೋಡ್‌ಗಳು ಮತ್ತು ಇದರ ಪರಿಣಾಮವಾಗಿ ವಿದ್ಯುತ್ ಬಳಕೆಯನ್ನು ನಾವು ಯಶಸ್ವಿಯಾಗಿ ಕಡಿಮೆಗೊಳಿಸಿದ್ದೇವೆ. ಇದು ತಾಜಾ ನೀರನ್ನು ಬಿಸಿ ಮಾಡುವುದರಿಂದ ವ್ಯರ್ಥವಾಗುವ ಇಂಧನವನ್ನು ಸಂರಕ್ಷಿಸುತ್ತದೆ ಮತ್ತು ಸ್ಥಿರವಾದ ಶಾಖದ ಪ್ರವಣತೆ ನೀಡುತ್ತದೆ, ನಮ್ಮ ಸೌಲಭ್ಯಗಳಲ್ಲಿ ಕೇವಲ ಈ ಅಭ್ಯಾಸವನ್ನು ತೊಡಗಿಸಿಕೊಂಡಿರುವುದು ಸ್ಥಿರ ಉತ್ಪನ್ನ ಗುಣಮಟ್ಟವನ್ನು ಖಾತ್ರಿಪಡಿಸಿದೆ, ನಾವು ಈ ವರ್ಷ ಸುಮಾರು 8 ಮಿಲಿಯನ್ ಲೀಟರ್‌ಗಳಷ್ಟು ನೀರು ಮತ್ತು 80,000ಕಿಲೋವ್ಯಾಟ್-ಗಂಟೆಗಳಷ್ಟು ವಿದ್ಯುಚ್ಛಕ್ತಿಯನ್ನು ಉಳಿಸಿದ್ದೇವೆ. ಅಲ್ಲದೇ ಪ್ರತಿಷ್ಠಿತ ಏಜೆನ್ಸಿಗಳು ನಿಯತಕಾಲಿಕವಾಗಿ ಇಂಧನದ ಆಡಿಟ್‌ಗಳನ್ನು ನಡೆಸಿ,  ಇಂಧನವನ್ನು ಸಂರಕ್ಷಿಸಲು ವಿವಿಧ ಮಾನದಂಡಗಳನ್ನು ಶಿಫಾರಸು ಮಾಡುತ್ತಾರೆ, ಇದು ನಮಗೆ ಇಲ್ಲಿಯವರೆಗೆ ಸರಾಸರಿ 35,000ಕಿಲೋವ್ಯಾಟ್-ಗಂಟೆಗಳಷ್ಟು ವಿದ್ಯುತ್ ಉಳಿತಾಯ ಮಾಡಲು ನೆರವಾಗಿದೆ.



## 2 ನೈಸರ್ಗಿಕ ಉತ್ಪನ್ನಗಳೊಂದಿಗೆ ಉತ್ಪಾದಿಸಲಾಗಿದೆ



ಪ್ರತಿ ದ್ರಾವಣವು ಫ್ಯಾಕ್ಟರಿಯಿಂದ ತಾಜಾ ಆಗಿ ಬಂದಿರಬೇಕಾಗಿಲ್ಲ. ನಮ್ಮ ದೈನಂದಿನ ಸವಾಲುಗಳಿಗೆ, ನಾವು ಸರಳ, ಸಾವಯವ ದ್ರಾವಣಗಳನ್ನು ನೈಸರ್ಗಿಕವಾಗಿ ತಯಾರಿಸಲು ಪ್ರಾರಂಭಿಸಿದ್ದೇವೆ. ಮತ್ತು ನಿಧಾನವಾಗಿ ನಾವು ವಿಭಿನ್ನವಾಗಿರಲು ಬದಲಾವಣೆ ಮಾಡುತ್ತಿದ್ದೇವೆ. ಇದಕ್ಕೆ ಉದಾಹರಣೆ ಎಂಬಂತೆ ಸಂಶ್ಲೇಷಿತ ಮತ್ತು ಪೆಟ್ರೋಕೆಮಿಕಲ್ ಉತ್ಪನ್ನಗಳಿಗೆ ಬದಲಾಗಿ ನಾವು ನೈಸರ್ಗಿಕವಾಗಿ ದೊರೆಯುವ ಉತ್ಪನ್ನಗಳಾದ ಗೋಡಂಬಿ ಚಿಪ್ಪುಗಳನ್ನು  ಬಳಸುವ ನಮ್ಮ ನಿರ್ಧಾರ. ಗೋಂಡಬಿ ಸಂಸ್ಕರಣೆಯಲ್ಲಿನ ತ್ಯಾಜ್ಯವಾದ ಈ ಚಿಪ್ಪುಗಳು, ದೀರ್ಘ ಸರಪಳಿಯ ಫಿನಾಲ್‌ಗಳ ಅತ್ಯುತ್ತಮ ಮೂಲಗಳಲ್ಲಿ ಒಂದು. ಪ್ರಸ್ತುತ, ಸುಮಾರು ನಮ್ಮ ಫಿನಾಲ್ ಬಳಕೆಯ 10% ಅನ್ನು ಬದಲಿಸುವಲ್ಲಿ ನಾವು ಯಶಸ್ವಿಯಾಗಿದ್ದೇವೆ, ಇದು ನಮ್ಮ ರಾಳದ ತಂತ್ರಜ್ಞಾನವನ್ನು ಮಾರ್ಪಡಿಸಲು ನೆರವಾಗಿದೆ, ಇದರ ಪರಿಣಾಮವಾಗಿ: ಉತ್ಪನ್ನ ನಮ್ಯತೆ ಮತ್ತು ಕಾಂಪ್ಯಾಕ್ಟ್ ಬೋರ್ಡ್‌ಗಳ ಯಂತ್ರ ಸಾಮರ್ಥ್ಯವನ್ನು ಹೆಚ್ಚಿಸಿದೆ, ಇದರಿಂದ ಸಂಸ್ಕರಣೆ ಮತ್ತು ಅಂತಿಮ ಉತ್ಪನ್ನದಿಂದ ಹೊರಸೂಸುವ ವಿಓಸಿಗಳನ್ನು ತಗ್ಗಿಸಿದೆ. ಕಾರ್ಖಾನೆಯಲ್ಲಿ ಅಪಾಯಕಾರಿ ವಸ್ತುಗಳ ಸಂಗ್ರಹ ಮತ್ತು ನಿರ್ವಹಣೆಯನ್ನು ಕಡಿಮೆಗೊಳಿಸಿದೆ. ರಾಜಿಯಾಗದ ಕಾರ್ಯಕ್ಷಮತೆಯನ್ನು ಸಾಧಿಸಿದೆ. ಇದರಿಂದ ತೊಳೆಯುವ ಪ್ರಕ್ರಿಯೆಯ ಅವಶ್ಯಕತೆಯನ್ನು ಇಲ್ಲವಾಗಿಸಿ, ಕೈಗಾರಿಕೆಯಲ್ಲಿ ಶೂನ್ಯ ವಿಸರ್ಜನೆಯನ್ನು ಸಾಧ್ಯವಾಗಿಸಿದೆ.

3

## ಶೂನ್ಯ ದ್ರಾವಣ ವಿಸರ್ಜನೆ



ಸುಸ್ಥಿರವಲ್ಲದ ಬಳಕೆಯು ನಮ್ಮ ಮಣ್ಣು ಮತ್ತು ನೀರನ್ನು ಕಲುಷಿತಗೊಳಿಸಿ ತ್ಯಾಜ್ಯವನ್ನು ಸೃಷ್ಟಿಸುವ ಮೂಲಕ ಭೂಮಿಯ ಒತ್ತಡವನ್ನು ಹೆಚ್ಚಿಸುತ್ತದೆ. ಗ್ರೀನ್‌ಲಾಮ್‌ನಲ್ಲಿ, ನಮ್ಮ ಕಾರ್ಖಾನೆಯಿಂದ ಯಾವುದೇ ವಿಷಕಾರಿ ತ್ಯಾಜ್ಯಗಳು ಉಳಿಯುವುದಿಲ್ಲವೆಂದು ನಾವು ಖಾತ್ರಿಪಡಿಸುತ್ತೇವೆ. ಇದರ ಮೇಲೆ ನಿಗಾ ಇಡಲು, ಕಾಗದ ತುಂಬಿಸುವ ಪ್ರಕ್ರಿಯೆಯಲ್ಲಿ ಬಳಸಲಾಗುವ ಅಮಿನೋ ರೆಸಿನ್‌ಗಳು ಮತ್ತು ಫಿನಾಲಿಕ್ ರೆಸಿನ್‌ಗಳ ಉತ್ಪಾದನೆಯಲ್ಲಿ ನಾವು ನಿರಂತರ ಸಂಶೋಧನೆ ಮತ್ತು ಮಾರ್ಪಾಡನ್ನು ನಿರ್ವಹಿಸುತ್ತೇವೆ. ಈ ಸರಳ ಮತ್ತು ಅಗತ್ಯ ವಿಧಾನವು ದ್ರಾವಕ-ಮುಕ್ತ ಉತ್ಪನ್ನವನ್ನು ಖಾತ್ರಿಪಡಿಸುತ್ತದೆ, ಇದು ನಮ್ಮ ಕಾರ್ಖಾನೆಯಲ್ಲಿಕೇವಲ ಅಶ್ರುಕಾರಕ ಹೊಗೆಗಳ ಹೊರಸೂಸುವಿಕೆಯನ್ನು ಕಡಿಮೆಗೊಳಿಸುವುದಲ್ಲದೇ ಶೂನ್ಯವಿಸರ್ಜನೆಗೆ ಕಾರಣವಾಗುತ್ತದೆ.

4

## ನವೀಕರಿಸಬಹುದಾದ ಇಂಧನದ ಬಳಕೆ



ನಮ್ಮ ಪರಿಸರವನ್ನು ಸಂರಕ್ಷಿಸಲು ನಾವು ಲಭ್ಯವಿರುವ ಅನೇಕ ಮರುಬಳಕೆಯ ಇಂಧನದ ಮೂಲಗಳ ಸಂಪೂರ್ಣ ಬಳಕೆಯನ್ನು ಮಾಡುತ್ತೇವೆ. ಇವುಗಳನ್ನು ಖರೀದಿಸುವುದು ಕೇವಲ ಸುಲಭ ಮತ್ತು ಅಗ್ಗ ಮಾತ್ರವಲ್ಲ, ಇವುಗಳು ಕಡಿಮೆ ಹಾನಿಕಾರಕವೂ ಆಗಿದೆ. ಆದ್ದರಿಂದ ನಾವು ವಾರ್ಷಿಕ 13 ಮಿಲಿಯನ್ ಕಿಲೋಗಳಷ್ಟು ಜೈವಿಕ ಇಂಧನವನ್ನು ಬಳಸಿಕೊಳ್ಳುತ್ತೇವೆ, ಇದು 1.16 ಮಿಲಿಯನ್ ಟನ್‌ಗಳಷ್ಟು CO2 ಹೊರಸೂಸುವಿಕೆಯನ್ನು ಸರಿದೂಗಿಸುತ್ತದೆ ಮತ್ತು ನಮ್ಮ ಸೌರ ಶಕ್ತಿ ಕಾರ್ಖಾನೆಯು 0.3 ಮಿಲಿಯನ್ ವ್ಯಾಟ್‌ಗಳಷ್ಟು ಶಕ್ತಿಯನ್ನು ಉತ್ಪಾದಿಸುತ್ತದೆ. ಇದು ನಮ್ಮನ್ನು ಸ್ವಚ್ಛ ಮತ್ತು ಹಸಿರು ಪರಿಸರಕ್ಕೆ ಒಂದು ಹೆಜ್ಜೆ ಹತ್ತಿರ ಕೊಂಡೊಯ್ಯುತ್ತದೆ.

5

## ಜವಾಬ್ದಾರಿಯುತ ಅರಣ್ಯೀಕರಣ



ನಮ್ಮ ಕಚ್ಚಾವಸ್ತುಗಳ ಅಗತ್ಯಗಳಿಗೆ ಅರಣ್ಯಗಳನ್ನು ಅವಲಂಬಿಸುತ್ತಿದ್ದರೂ, ನಾವು ಅವುಗಳ ಸಂರಕ್ಷಣೆಗೆ ಪ್ರಾಮಾಣಿಕವಾದ ಬದ್ಧತೆಯನ್ನೂ ಹೊಂದಿದ್ದೇವೆ. ಗ್ರೀನ್ಲ್ಯಾಮ್ FSC® ಸರ್ಟಿಫೈಡ್ ಉತ್ಪನ್ನಗಳು ಎನ್ನುವ ಪ್ರಮಾಣಪತ್ರವನ್ನು ಅಗತ್ಯವಿದ್ದಲ್ಲಿ ಒದಗಿಸುತ್ತದೆ. (ಸರ್ಟಿಫಿಕೇಟ್ ನಂ. **FSC–C 100034**) & PEFC ಸರ್ಟಿಫೈಡ್ ಉತ್ಪನ್ನಗಳು (ಲೈಸೆನ್ಸ್ ನಂ. **PEFC/01-32-404**) ನಾವು ಸುಸ್ಥಿರ ಮತ್ತು ಜವಾಬ್ದಾರಿಯುತವಾಗಿ ಪ್ರಾಕೃತಿಕ ಸಂಪನ್ಮೂಲಗಳನ್ನು ಬಳಸುತ್ತಿದ್ದೇವೆ ಎನ್ನುವ ಹೇಳಿಕೆಗೆ ಮಾನ್ಯತೆ ಒದಗಿಸುತ್ತವೆ. ನವೀಕೃತ ಮಾಹಿತಿಗಳ ಜೊತೆಗೆ, ವಸ್ತುಗಳ ಬಳಕೆಗೆ ಪೂರ್ವ ಮತ್ತು ನಂತರದ ಮಾನ್ಯತೆಯು ಪ್ರತೀ ಉತ್ಪನ್ನವು ಅತ್ಯುನ್ನತ ಮಟ್ಟದ ಕಾರ್ಯಕಾರಿ ಚಹರೆಗಳನ್ನು ರಕ್ಷಿಸುವ ಬಗ್ಗೆ ಮತ್ತು ಎಲ್ಲಾ ಹೊರ ಹಾಕುವ ತ್ಯಾಜ್ಯಗಳ ನಿಯಮ ಅಳವಡಿಸಿಕೊಂಡಿರುವ ನಮ್ಮ ಬದ್ಧತೆಯಾಗಿದೆ. ಅಷ್ಟು ಮಾತ್ರವಲ್ಲ. ನಮ್ಮ ಸಸ್ಯ ನೆಟ್ಟ ಸ್ಥಳಗಳ ಕೆಲವು ಭಾಗಗಳು ಪ್ರಾದೇಶಿಕ ವಾತಾವರಣಕ್ಕೆ ಪೂರಕವಾದ ಸ್ಥಳೀಯ ಅಥವಾ ಸ್ಥಳೀಯವಾಗಿ ಅನ್ವಯಿಸಿಕೊಂಡ ಮರಗಳ ಪ್ರಬೇಧವನ್ನು ಬಳಸಿಕೊಂಡು ಸಮಾಜ, ಅರ್ಥವ್ಯವಸ್ಥೆ ಮತ್ತು ಪರಿಸರಕ್ಕೂ ಲಾಭದಾಯಕವಾಗಿವೆ.

## 6 ಪರಿಸರ-ಸ್ನೇಹಿ ಉತ್ಪನ್ನಗಳು



ನಮ್ಮ ಬಳಕೆದಾರರದ ಸುರಕ್ಷತೆ ಯಾವತ್ತಿಗೂ ನಮ್ಮ ಮೊದಲ ಆದ್ಯತೆಯಾಗಿದೆ. ಆದ್ದರಿಂದ ನಮ್ಮ ಉತ್ಪನ್ನಗಳು ಗ್ರೀನ್ ಗಾರ್ಡ್, ಗ್ರೀನ್ ಗಾರ್ಡ್ ಗೋಲ್ಡ್, ಗ್ರೀನ್ ಲೇಬಲ್ (ಸಿಂಗಾಪುರ) ಮತ್ತು EN 16516 ಪ್ರಮಾಣೀಕರಣವನ್ನು ಹೊಂದಿದೆ. VOC ಗಳು,ಫಾರ್ಮಾಲಿನ್ ಮತ್ತು ಇತರ ಮಿತ್ರ ರಾಸಾಯನಿಕ ಘಟಕಗಳ ಹೊರಸೂಸೂವಿಕೆಗಳ ಎಲ್ಲಾ ನಿರೀಕ್ಷಿತ ಮಾನದಂಡಗಳಿಗೆ ಅನುಗುಣವಾಗಿರುವುದರಿಂದ, ಗ್ರೀನ್‌ಲಾಮ್ ಉತ್ಪನ್ನಗಳು ಬಳಕೆಗೆ ಸುರಕ್ಷಿತವಾಗಿದೆ.

## 7 ಮೇಲ್ವಿಚಾರಣೆ ನಡೆಸಲಾದ ಒಳಾಂಗಣ ಗಾಳಿಯ ಗುಣಮಟ್ಟ (IAQ)




ನಮ್ಮ ಸಿಬ್ಬಂದಿಯ ಆರೋಗ್ಯವನ್ನು ನಾವು ಗಂಭೀರವಾಗಿ ಪರಿಗಣಿಸುತ್ತೇವೆ. ಮತ್ತು ಅದಕ್ಕಾಗಿ ಆರೋಗ್ಯಕರ ಕೆಲಸದ ವಾತಾವರಣವನ್ನು ಖಾತ್ರಿಪಡಿಸಲು ನಾವು ವಾತಾವರಣದ ಗಾಳಿಯನ್ನು ಸಂರಕ್ಷಿಸುವುದರೊಂದಿಗೆ ಒಳಾಂಗಣ ಗಾಳಿಯ ಗುಣಮಟ್ಟವನ್ನು ಪರಿಶೀಲಿಸಲು ನಿಯತಕಾಲಿಕವಾಗಿ ಪರೀಕ್ಷೆಗಳನ್ನು ನಡೆಸುತ್ತೇವೆ.



## 8 ಸುರಕ್ಷಿತ ಮತ್ತು ಅಪಾಯರಹಿತ ಉತ್ಪನ್ನಗಳು

ಗ್ರೀನ್‌ಲಾಮ್ ಉತ್ಪನ್ನಗಳು ಅಪಾಯರಹಿತವಾದವು ಮತ್ತು ‘ಹಾನಿಕಾರಕ ವಸ್ತುಗಳು’, ಅಪೆಂಡಿಕ್ಸ್ ಜೆ ಪಟ್ಟಿಯಲ್ಲಿ ಬೀಳುವುದಿಲ್ಲ. ಉತ್ಪಾದನೆಯ ಸಮಯದಲ್ಲಿ ನಾವು ಆಸ್‌ಬೆಸ್ಟೋಸ್, ಕಾಪರ್ ಕ್ರೋಮೇಟ್ಸ್, ಆರ್ಸಿನೇಟ್ ಸಂಯುಕ್ತಗಳು, ಸೀಸ ಅಥವಾ ಇನ್ಯಾವುದೇ ಇತರ ಭಾರ ಲೋಹಗಳನ್ನು ಬಳಸುವುದಿಲ್ಲ, ಅಲ್ಲದೇ ನಮ್ಮ ಯಾವುದೇ ಉತ್ಪನ್ನಗಳಲ್ಲಿ ಯೂರಿಯಾ ಅಥವಾ ಯೂರಿಯಾ-ಫಾರ್ಮಾಲ್‌ಡಿಹೈಡ್ ಸೇರಿಸಲಾಗುವುದಿಲ್ಲ ಎಂದು ನಾವು ಖಾತ್ರಿಪಡಿಸುತ್ತೇವೆ. ಇದರೊಂದಿಗೆ, ನಮ್ಮ ಉತ್ಪನ್ನಗಳು ನಿಯಂತ್ರಿತ ಮಟ್ಟದ NTP (ರಾಷ್ಟ್ರೀಯ ವಿಷಕಾರಿ ಕಾರ್ಯಕ್ರಮ), IARC (ಕ್ಯಾನ್ಸರ್ ಸಂಶೋಧನೆಗಾಗಿ ಅಂತರಾಷ್ಟ್ರೀಯ ಸಂಸ್ಥೆ) ಅಥವಾ OSHA ದಲ್ಲಿ ಪಟ್ಟಿ ಮಾಡಲಾದ ಕಾರ್ಸಿನೋಜೆನ್‌ಗಳನ್ನು ಹೊಂದಿರುವುದಿಲ್ಲ.



9

## ಜವಾಬ್ದಾರಿಯುತ ಲಾಜಿಸ್ಟಿಕ್ಸ್ ವ್ಯವಸ್ಥೆ

ನಮ್ಮ ದೇಶದಲ್ಲಿ ಮಾಲಿನ್ಯದ ಅಪಾಯಕಾರಿ ಮಟ್ಟಗಳನ್ನು ಗಮನದಲ್ಲಿಟ್ಟುಕೊಂಡು, ಈ ಸಮಸ್ಯೆಗಳು ಮತ್ತಷ್ಟು ಉಲ್ಬಣಗೊಳ್ಳದಿರಲು ನಾವು ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಉದಾಹರಣೆಗೆ, ವಿಷಮುಕ್ತ, ಶುದ್ಧ ಗಾಳಿಯನ್ನು ಖಾತ್ರಿಪಡಿಸಲು ನಾವು ಕೇವಲ ಇಂಧನ-ಸಮರ್ಥ ಮತ್ತು ಕಡಿಮೆ-ಅನಿಲ ಹೊರಸೂಸುವ ವಾಹನಗಳನ್ನು ಮಾತ್ರ ಬಳಸುತ್ತೇವೆ.



10

## ಪರಿಣಾಮಕಾರಿ ತ್ಯಾಜ್ಯ ನಿರ್ವಹಣೆ

“ಕಡಿಮೆ ಬಳಸು, ಮರುಬಳಸು, ಪುನರುಪಯೋಗಿಸು” ಈ ಮಂತ್ರದೊಂದಿಗೆ ನಾವು ಗ್ರೀನ್‌ಲಾಮ್‌ನಲ್ಲಿ ವಾಸಿಸುತ್ತೇವೆ. ನಮ್ಮ ಸಂಪನ್ಮೂಲಗಳ ನೈಜ-ಸಮಯದ ಮೇಲ್ವಿಚಾರಣೆಯು ನಮ್ಮ ತ್ಯಾಜ್ಯ ಉತ್ಪಾದನೆಯನ್ನು ಗಣನೀಯ ಮಟ್ಟದಲ್ಲಿ ಕಡಿಮೆಗೊಳಿಸಿ ನಮ್ಮ ಸಂಸ್ಕರಣೆಯ ಮತ್ತು ವಿಲೇವಾರಿ ಮೊತ್ತವನ್ನು ಕಡಿಮೆಗೊಳಿಸಿದೆ. ಈ ಎಲ್ಲದರೊಂದಿಗೆ ಪೇಪರ್ ತ್ಯಾಜ್ಯದ ಮರುಬಳಕೆ ಸುಮಾರು 8,000 ಪೂರ್ಣ-ಬೆಳೆದ ಮರಗಳನ್ನು ಉಳಿಸುವುದಕ್ಕೆ ನೆರವಾಗಿದೆ.





Greenlam Industries Limited

ಪ್ರಾರಂಭದಿಂದಲೂ ಗ್ರೀನ್‌ಲ್ಯಾಮ್, ಅಸಾಧಾರಣ ಕಲಾತ್ಮಕತೆಯ ವಿಶಿಷ್ಟ ಲಕ್ಷಣವಾಗಿದೆ ಮತ್ತು ನಾವೀನ್ಯತೆಯತ್ತ ಅಪರಿಮಿತ ಉತ್ಸಾಹದಿಂದ ತೋರುತ್ತಿದೆ. ಕಾಂಪ್ಯಾಕ್ಟ್‌ಗಳು ಮತ್ತು ಲ್ಯಾಮಿನೇಟ್‌ಗಳ ವಿಶ್ವದ ಅಗ್ರ ಮೂರು ತಯಾರಕರಲ್ಲಿ ಎತ್ತರದಲ್ಲಿ ನಿಂತಿದೆ, ಇದು 14,000 ಪಾಲುದಾರ ವಿತರಕರು ಮತ್ತು ಡೀಲರ್ ನೆಟ್‌ವರ್ಕ್‌ನೊಂದಿಗೆ 100ಕ್ಕೂ ಹೆಚ್ಚು ದೇಶಗಳಲ್ಲಿ ಅಸ್ತಿತ್ವವನ್ನು ಹೊಂದಿದೆ. ಎರಡು ಅತ್ಯಾಧುನಿಕ ಉತ್ಪಾದನಾ ಸೌಲಭ್ಯಗಳೊಂದಿಗೆ, ಗ್ರೀನ್‌ಲ್ಯಾಮ್ ಈಗ ಭಾರತದ ಅತಿದೊಡ್ಡ ಲ್ಯಾಮಿನೇಟ್‌ಗಳ ರಫ್ತುದಾರರಾಗಿದ್ದಾರೆ. ಇದಕ್ಕೆ ಇನ್ನಷ್ಟು ಸೇರ್ಪಡೆಯೆಂಬಂತೆ, ಇದರ ಬಹುಮುಖ ವಿನ್ಯಾಸದ ಶ್ರೇಣಿಯ ಜೊತೆಗೆ ಉತ್ಪನ್ನದ ಉನ್ನತ ಸಂಸ್ಕರಣವು ಇದನ್ನು ವಾಸ್ತುಶಿಲ್ಪಿಗಳು, ಒಳಾಂಗಣ ವಿನ್ಯಾಸಕರು ಮತ್ತು ಮನೆ ಮಾಲೀಕರ ಮೊದಲ ಆಯ್ಕೆಯನ್ನಾಗಿ ಮಾಡಿದೆ. ಗ್ರೀನ್‌ಲ್ಯಾಮ್ ಲ್ಯಾಮಿನೇಟ್‌ಗಳು, ಕಾಂಪ್ಯಾಕ್ಟ್‌ಗಳು, ಹೊರ ಮತ್ತು ಒಳ ಕ್ಲಾಡ್‌ಗಳು, ಸ್ನಾನಗೃಹದಲ್ಲಿನ ಕ್ಯುಬಿಕಲ್‌ಗಳು ಮತ್ತು ಲಾಕರ್‌ಗೆ ಸಂಬಂಧಿಸಿದ ಪರಿಹಾರಗಳು, ಅಲಂಕಾರಿಕ ಹೊದಿಕೆಗಳು, ನ್ಯೂಮೈಕಾ ಲ್ಯಾಮಿನೇಟ್‌ಗಳು, ಇಂಜಿನಿಯರ್ಡ್ ಮರದ ಫ್ಲೋರ್‌ಗಳು, ಇಂಜಿನಿಯರ್ಡ್ ಮರದ ಬಾಗಿಲುಗಳು ಮತ್ತು ಫ್ರೇಮ್‌ನಂತಹ ಮೇಲ್ಮೈಗೆ ಸಂಬಂಧಿಸಿದ ಎಲ್ಲಾ ರೀತಿಯ ಸಂಪೂರ್ಣ ಶ್ರೇಣಿಯ ಪರಿಹಾರಗಳನ್ನು ನೀಡುತ್ತದೆ. ಇದು ದೃಢತೆ ಮತ್ತು ಶೈಲಿಯ ಪರಿಪೂರ್ಣ ಸಂಯೋಜನೆಯಾಗಿದೆ. ಜನರು ಮತ್ತು ಸಂಪೂರ್ಣ ಜಗತ್ತಿಗೆ ಬದ್ಧವಾಗಿರುವಾಗ ಅತ್ಯುತ್ತಮ ಮೇಲ್ಮೈಗೆ ಸಂಬಂಧಿಸಿದ ಪರಿಹಾರವನ್ನು ನೀಡಲು ಸಂಶೋಧನೆ ಮತ್ತು ನಾವೀನ್ಯತೆಯ ಮೂಲಕ ತನ್ನ ಉತ್ಪನ್ನಗಳನ್ನು ನಿರಂತರವಾಗಿ ಸುಧಾರಿಸಿದೆ.

Greenlam LAMINATES | decowood PREMIUM VENEERS NATURAL | TEAK | ENGINEERED | NEW MIKA NEW-AGE LAMINATES FROM GREENLAM | Mikasa REAL WOOD FLOORS | Mikasa DOORS & FRAMES

**Global Headquarter:** 2nd Floor, West Wing, Worldmark 1, Aerocity IGI Airport Hospitality District, New Delhi - 110037.
Tel: (91 11-4279-1399) | Email: info@greenlam.com | Web: www.greenlamindustries.com

/greenlamlaminate /greenlam01 /greenlam_laminates/ /greenlamIndustries